ಅಸಲು ದಾವೆ ಸಂಖ್ಯೆ -161/2018
ಪಿ.ಡಬ್ಲ್ಯೂ - 01
ದಿನಾಂಕಃ 09-07-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ</u>

ದಿಃ 21-05-2018 ರಂದು ಪ್ರತಿವಾದಿಯರು ನಿಮ್ಮ ಜಮೀನನ್ನು ಅತೀಕ್ರಮಣ ಮಾಡಿದ್ದಾರೆ ಎಂದು ಹೇಳಿದ್ದೀರಿ ಎಷ್ಟು ವಿಸ್ತೀರ್ಣದಷ್ಟು ಅತೀಕ್ರಮಣ ಮಾಡಿದ್ದಾರೆ ಎಂದರೆ, ಉದ್ದ ಪೂರ್ವ- ಪಶ್ಚಿಮ 11 ಪೂಟು, ಅಗಲ 6 ಪೂಟ ನಷ್ಟು ಅತೀಕ್ರಮಣ ಮಾಡಿರುತ್ತಾರೆ. ಪ್ರತಿವಾದಿಯರ ಆಸ್ತಿಯಲ್ಲಿ ಒಟ್ಟು 9 ಪ್ಲಾಟುಗಳು ಇವೆ ಎಂದರೆ ಸರಿ. ಸದರಿ 9 ಪ್ಲಾಟಗಳು ಪ್ರತಿವಾದಿಯರ ಮಾಲ್ಕಿ ಆಸ್ತಿಗಳು ಎಂದರೆ ಸರಿ. ಸದರಿ 9 ನೇ ಪ್ಲಾಟು ಆಸ್ತಿ 11 ಗುಂಟೆ 14 ಆಣೆ ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನೀವು ಪ್ರತಿವಾದಿಯರಿಂದ ಎಷ್ಟು ಗುಂಟೆ ಖರೀದಿ ಮಾಡಿದ್ದೀರಿ ಎಂದರೆ ಪ್ಲಾಟ ನಂ 8 ರಲ್ಲಿ ದಕ್ಷಿಣ ಭಾಗದ 5 ಗುಂಟೆ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ಪ್ರತಿವಾದಿಯರ ಆಸ್ತಿಯ ಯಾವ ದಿಕ್ಕಿಗೆ ನಿಮ್ಮ ಆಸ್ತಿ ಇದೆ ಎಂದರೆ ಉತ್ತರ ದಿಕ್ಕಿಗೆ ನಮ್ಮ ಆಸ್ತಿ ಇದೆ. ನಿಮ್ಮ ಖರೀದಿ ಪತ್ರದಲ್ಲಿ ದಕ್ಷಿಣ ದಿಕ್ಕಿಗೆ ಪ್ರತಿವಾದಿಯ ಆಸ್ತಿ ಎಂದು ಕಾಣಿಸಿದ್ದೀರಿ ಎಂದರೆ ಸರಿ. ಪ್ರತಿವಾದಿಯರ ಆಸ್ತಿ ಸಂಖ್ಯೆಃ 9 ನೇ ಪ್ಲಾಟನಲ್ಲಿ ನಿಮಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿ. ಪ್ರತಿವಾದಿಯರ ಪ್ಲಾಟ ನಂ 9 ಕ್ಕೆ ಪಂಚಾಯತಿಯವರು ವಿ ಪಿ ಸಿ ನಂ. 469 ನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ವಿ ಪಿ ಸಿ ನಂ. 469 ಆಸ್ತಿಯಲ್ಲಿ ಪ್ರತಿವಾದಿಯರು ವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ಅವರ ಆಸ್ತಿಯ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿ ಪಿ ಸಿ ನಂ. 469 ರಲ್ಲಿ ಪ್ರತಿವಾದಿಯರು 3 ಭಾಗಗಳಾಗಿ ಮಾಡಿಕೊಂಡಿದ್ದು ಅದನ್ನು 469, 469/1 ಮತ್ತು 469/2 ಎಂದು ಮಾಡಿಕೊಂಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ನೀವು ವಾದ ಪತ್ರದ ಜೊತೆ ಹಾಜರುಪಡಿಸಿರುವ ಹಾತ್ ನಕಾಶೆಯಲ್ಲಿ ನಿಮ್ಮ ಆಸ್ತಿಯ ಉದ್ದ-ಅಗಲ ಎಷ್ಟು ಇದೆ ಎಂದು ಬರೆಸಿಲ್ಲ ಎಂದರೆ ಸರಿ.

ನಿಮ್ಮ ಖರೀದಿ ಪತ್ರದಲ್ಲಿ ಆಸ್ತಿಯ ಉದ್ದ - ಅಗಲ ಎಷ್ಟು ಇದೆ ಎಂದು ಬರೆಸಿದ್ದೀರಿ ಎಂದರೆ 5 ಗುಂಟೆ ಎಂದು ಬರೆಸಿದ್ದೇವೆ ಉದ್ದ- ಅಗಲ ಎಷ್ಟು ಇದೆ ಎಂದು ಬರೆಸಿರುವುದಿಲ್ಲ. ನಿಮ್ಮ ಆಸ್ತಿಯ ವಿಸ್ತೀರ್ಣ ಎಷ್ಟು ಇದೆ ಎಂದರೆ ಪೂರ್ವ-ಪಶ್ಚಿಮ 121 ಪೂಟ, ಉತ್ತರ-ದಕ್ಷಿಣ 47 ಪೂಟ ಎಂದು ನುಡಿಯುತ್ತಾರೆ. ಸದರಿ ಉದ್ದ ಮತ್ತು ಅಗಲದ ಬಗ್ಗೆ ನಿಮ್ಮ ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ನೀವು ಯಾವ ಆಧಾರದ ಮೇಲೆ ನಿಮ್ಮ ಆಸ್ತಿ ಪೂರ್ವ-

ಪಶ್ಚಿಮ 121 ಪೂಟ, ಉತ್ತರ- ದಕ್ಷಿಣ 47 ಪೂಟ ಇದೆ ಎಂದು ಹೇಳುತ್ತಿದ್ದೀರಿ ಎಂದರೆ ಕೆ ಜಿ ಪಿ ಯ ನಕಾಶೆಯ ಆಧಾರದ ಮೇಲೆ ಹೇಳುತ್ತಿದ್ದೇನೆ. ಸದರಿ ಅಳತೆಯನ್ನು ದಾವೆ ಮಾಡುವ ಕಾಲಕ್ಕೆ ನಿಮ್ಮ ವಾದ ಪತ್ರದಲ್ಲಿ ಬರೆಸಲು ತೊಂದರೆ ಇತ್ತಾ ಎಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಹಾತ ನಾಕಶೆಯಲ್ಲಿ ನಿಮ್ಮ ಆಸ್ತಿಯ ಮನೆಯ ಗೊಡೆಯಿಂದ ದಕ್ಷಿಣ ದಿಕ್ಕಿಗೆ 12 ಪೂಟ ಜಾಗ ಬಿಟ್ಟೇದ್ದೆವೆ ಎಂದು ಬೆರಸಿದ್ದೀರಿ ಎಂದರೆ ಸರಿ. ಮುಂದುವರೆದು ವಹಿವಾಟಿಗಾಗಿ ಬಿಟ್ಟಿದ್ದೇವೆ ಎಂದು ನುಡಿಯುತ್ತಾರೆ. ವಹಿವಾಟಿಗಾಗಿ 12 ಪೂಟ ಬಿಟ್ಟದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮನೆಯ ಒಟ್ಟು ವಿಸ್ತೀರ್ಣ ಹೇಳಲು ಆಗುತ್ತದೆಯಾ ಎಂದರೆ ಪೂರ್ವ-ಪಶ್ಚಿಮ 58 ಪೂಟ, ಉತ್ತರ- ದಕ್ಷಿಣ 58 ಪೂಟ ಇದೆ ಎಂದು ನುಡಿಯುತ್ತಾರೆ. ಸದರಿ ಅಳತೆಯನ್ನು ಹಾತ ನಕಾಶೆಯಲ್ಲಿ ತೋರಿಸಿಲ್ಲ ಎಂದರೆ ಸರಿ.

ಪ್ರತಿವಾದಿಯರು ನಿಮ್ಮ ಕಬ್ಜೆಗೆ ಹರಕತ್ತು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅವರ ಆಸ್ತಿಯನ್ನು ನೀವೆ ಅತೀಕ್ರಮಣ ಮಾಡಿದ್ದರು ಸಹ ನೀವೇ ಅವರ ವಿರುದ್ಧ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ಎಂದಿಗೂ ಸಹ ನಿಮ್ಮ ಕಬ್ಜಾ ವಹಿವಾಟಿಗೆ ಹರಕತ್ತ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಯನ್ನು ಅತೀಕ್ರಮಾಣ ಮಾಡಿದ್ದು ಅದನ್ನು ಎತ್ತಿಹಾಕುವ ಉದ್ದೇಶದಿಂದ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.